ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 158-165
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭಾರತದಲ್ಲಿ ಬದಲಾಗುತ್ತಿರುವ ಶಿಕ್ಷಣ ನಿರಾಕರಣೆಯ ಸ್ವರೂಪಗಳು

**ನಾಗರಾಜ ಟಿ**
ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Abstract:**
*ಪ್ರಕೃತಿ, ಸಮಾಜ ಮತ್ತು ಸಂಸ್ಕೃತಿಯನ್ನು ಕಲಿಕೆಯು ಪೀಳಿಗೆಗೆ ಹಾಗೂ ಅಕ್ಷರದ ಮೂಲಕ ವರ್ಗಾಯಿಸುತ್ತದೆ. ಇದು ಮಗುವಿನಿಂದ ಹಿಡಿದು ವಯೋವೃದ್ಧರವರೆಗೂ ಕಲಿಕೆಯು ನಡೆಯುವ ಪ್ರಕ್ರಿಯೆಯಾಗಿದೆ. ಶಿಕ್ಷಣವು ಪ್ರಾಚೀನ ಕಾಲದಲ್ಲಿ ಮೌಖಿಕವಾಗಿ, ಅನುಕರಣೆಯ ಮೂಲಕ ಮತ್ತು ಕಥೆ ಹೇಳುವ ಮೂಲಕ ಸನ್ನಡತೆಯನ್ನು ಕಲಿಯಲು ಹಾಗೂ ಉತ್ತಮ ವ್ಯಕ್ತಿತ್ವ ವಿಕಸನಕ್ಕಾಗಿ ನಡೆಯುತ್ತಿತ್ತು. ನಂತರದ ದಿನಗಳಲ್ಲಿ ಅಕ್ಷರಾಭ್ಯಾಸ ಪ್ರಾರಂಭವಾಗಿ ವ್ಯಾಕರಣ, ತತ್ವಜ್ಞಾನ, ವಿಜ್ಞಾನ, ಗಣಿತ–ಹೀಗೆ ಅನೇಕ ವಿಷಯಗಳ ಕುರಿತು ಬೋಧನೆಯನ್ನು ಮಾಡಲಾಗುತ್ತಿತ್ತು. ಇಂದು ಶಿಕ್ಷಣವು ಮಾನವರ ಹಾಗೂ ದೇಶದ ಅಭಿವೃದ್ಧಿಯ ಮಹತ್ವದ ಸಾಧನವಾಗಿದೆ. ಸಮಾಜದಲ್ಲಿ ಉತ್ತಮ ಮೌಲ್ಯಗಳನ್ನು, ಕೌಶಲ್ಯಗಳನ್ನು ರೂಢಿಸಿಕೊಳ್ಳುವ ಜೊತೆಗೆ ಜೀವನದ ತಳಹಂತದಿಂದ ಮೇಲ್ಮುಖ ಅಭಿವೃದ್ಧಿ ಪಥದತ್ತ ಸಾಗಲು ಸಹಕಾರಿಯಾಗಿದೆ. ಸಮಾಜದ ಉನ್ನತಿಗೆ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಪ್ರಕ್ರಿಯೆಗಳೆರಡು ಅಗತ್ಯವಾಗಿವೆ. ಅಕ್ಷರದ ಅರಿವಿನಿಂದ ಔಪಚಾರಿಕ ಶಿಕ್ಷಣ ಪ್ರಾರಂಭವಾದರೆ ಅನೌಪಚಾರಿಕ ಶಿಕ್ಷಣವು ಲೋಕಜ್ಞಾನದ ತಿಳುವಳಿಕೆಯ ಜೊತೆಗೆ ಮಾನವ ಸಂಪನ್ಮೂಲವನ್ನು ಹೆಚ್ಚಿಸಲು ಕೌಶಲ್ಯಗಳನ್ನು ಒಳಗೊಂಡಿದೆ. ಶಿಕ್ಷಣವೆಂದರೆ ಜೀವನ ನಿರ್ವಹಣೆಯ ತರಬೇತಿ, ಅನುಭವವನ್ನು ಪಡೆಯುವುದು, ಅರಿವನ್ನು ವಿಸ್ತರಿಸಿಕೊಳ್ಳುವುದು, ಜೀವನ ಮುಂದುವರೆಯುವಿಕೆಗೆ ಅವಶ್ಯಕವಿರುವ ಕೌಶಲ್ಯಗಳನ್ನು ಕಲಿತುಕೊಳ್ಳುವುದಾಗಿದೆ. ಪ್ರಸ್ತುತ ಲೇಖನದಲ್ಲಿ ಶಿಕ್ಷಣದ ಪದ್ಧತಿಯು ಆಧುನಿಕ ಶಿಕ್ಷಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.*

*ಪ್ರಮುಖ ಪದಗಳು : ಶಿಕ್ಷಣ, ಪ್ರಸ್ತುತ ಶಿಕ್ಷಣ, ಕರೋನ ಮತ್ತು ಶಿಕ್ಷಣ, ಆನ್ಲೈನ್ ಕಲಿಕೆ,*

**Keywords:** *ಶಿಕ್ಷಣ, ಪ್ರಸ್ತುತ ಶಿಕ್ಷಣ, ಕರೋನ ಮತ್ತು ಶಿಕ್ಷಣ, ಆನ್ಲೈನ್ ಕಲಿಕೆ,*

**ಪೀಠಿಕೆ**

ವ್ಯಕ್ತಿಯ ಸರ್ವಾಂಗೀಣ ವ್ಯಕ್ತಿತ್ವ ವಿಕಸನ ಪ್ರಕ್ರಿಯೆಯಲ್ಲಿ ಶಿಕ್ಷಣ ಪ್ರಮುಖ ಸಾಧನವಾಗಿದೆ. ಶಿಕ್ಷಣವು ಮಾನವ ಸಮೂಹದ ಸಂಸ್ಕೃತಿಯ ನಿರಂತರತೆ ಮತ್ತು ಸಂರಕ್ಷಣೆಯ ಹಲವು ಸಂಗತಿಗಳಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ಏಕೆಂದರೆ ಶಿಕ್ಷಣವು ಸಂಸ್ಕೃತಿಯ ಪುನರುತ್ಪಾದಕ ಸಾಧನವಾಗಿದೆ. ಶೈಕ್ಷಣಿಕ ಸಮಾಜಶಾಸ್ತ್ರಜ್ಞರಾದ ಪಿಯರಿ ಬ್ರೋಡೋರ್ ಅವರು ಸಮಾಜದ ಗಣ್ಯ ಸಮುದಾಯಗಳು, ತಮ್ಮ ಸಮುದಾಯಗಳ ಸಂಸ್ಕೃತಿಯ ಶ್ರೇಷ್ಠತೆಯ ಪ್ರಾಬಲ್ಯವನ್ನು ಪ್ರತಿಷ್ಠಾಪಿಸಲು ಶಿಕ್ಷಣವನ್ನು ಒಂದು ಪ್ರಮುಖ ಅಸ್ತ್ರವಾಗಿಸಿಕೊಂಡಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ.

**Please cite this article as:** ನಾಗರಾಜ, ಟಿ. (2025). ಭಾರತದಲ್ಲಿ ಬದಲಾಗುತ್ತಿರುವ ಶಿಕ್ಷಣ ನಿರಾಕರಣೆಯ ಸ್ವರೂಪಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(3), 158–165

ಆದಾಯ ಮತ್ತು ಅಧಿಕಾರದ ಶಕ್ತಿಯನ್ನು ತನ್ನದಾಗಿಸಿಕೊಂಡಿರುವ ಪ್ರಬಲ ಗಣ್ಯ ಸಮುದಾಯಗಳು ಪ್ರಬಲವಲ್ಲದ ಸಮುದಾಯಗಳು ಯಾವ ಮಾದರಿಯ ಸಂಸ್ಕೃತಿಯನ್ನು ಕಲಿಯಬೇಕು, ಮುಂದುವರಿಸಬೇಕು ಅಥವಾ ಪುನರುತ್ಪಾದಿಸಬೇಕು ಎಂಬುದನ್ನು ನಿರ್ಧರಿಸುತ್ತವೆ. ಅಂತಹ ಪ್ರಬಲ ಸಮುದಾಯಗಳು ತನ್ನ ಆದಾಯ, ಅಧಿಕಾರದಂತಹ ಸಂಪತ್ತಿನ ಶಕ್ತಿಗಳಿಗೆ ಕುತ್ತು ತರದಂತಹ ಉಪಾಯಗಳನ್ನು ಸದಾ ಹುಡುಕುತ್ತಲೇ ಇರುತ್ತವೆ. ಆ ಉಪಾಯಗಳು ದೇವರು–ಧರ್ಮ, ಮಾಟ–ಮಂತ್ರ, ಮತ–ಪಂಥ, ಜಾತಿ–ಜನಾಂಗ, ಸಂಪ್ರದಾಯ, ಪರಂಪರೆ ಹೆಸರಿನಲ್ಲಿರಬಹುದು ಅಥವಾ ಶಿಕ್ಷಣ, ಸಮೂಹ ಮಾಧ್ಯಮ, ವಿಜ್ಞಾನ– ತಂತ್ರಜ್ಞಾನ ಯಾವುದೇ ಆಗಿರಬಹುದು ಅದು ಆಳುವ ಸಮುದಾಯಗಳ ಗಣ್ಯತ್ವದ ಅಂತಸ್ತನ್ನು ಕಾಪಾಡುವಂತಿರಬೇಕು ಎಂದು ಪ್ರಯತ್ನಿಸುತ್ತಲೇ ಇರುತ್ತವೆ. ಗಣ್ಯ ಸಮುದಾಯಗಳು ಶಿಕ್ಷಣವನ್ನು ಸಾಂಸ್ಕೃತಿಕ ಬಂಡವಾಳ ಸೃಜನೆಯ ಸಾಧನವಾಗಿ ಬಳಸುತ್ತಲೇ ಬಂದಿವೆ.

ಭಾರತೀಯ ಸಾಮಾಜಿಕ ನೆಲೆಗಟ್ಟಿನಲ್ಲಿ ಶಿಕ್ಷಣವು ವರ್ಣವ್ಯವಸ್ಥೆಯೊಂದಿಗೆ ಗುರುತಿಸಿಕೊಂಡಿದೆ. ಮೇಲಿನ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮೂರು ವರ್ಣಗಳು ದ್ವಿಜತ್ವ, ಪ್ರಭುತ್ವ ಉಪನಯನ ಅಂತಸ್ತಿನೊಂದಿಗೆ ಶಿಕ್ಷಣವನ್ನು ಕಲಿಯುವ ಅವಕಾಶವನ್ನು ಪಡೆದುಕೊಂಡಿವೆ. ನಾಲ್ಕನೇ ಶೂದ್ರ ವರ್ಣವು ಅಂತಹ ಅವಕಾಶದಿಂದ ವಂಚಿತವಾಗಿರುವುದು ನಮ್ಮ ಇತಿಹಾಸದಿಂದ ತಿಳಿಯುತ್ತದೆ. ಭೂಮಿ, ಭಾಷೆ, ಶಿಕ್ಷಣದ ಮೇಲೆ ಪ್ರಭುತ್ವ ಸಾಧಿಸಿ ಅಧಿಕಾರ ಮತ್ತು ಆದಾಯವನ್ನು ತನ್ನದಾಗಿಸಿಕೊಂಡಿದ್ದ ಮೇಲಿನ ಮೂರು ವರ್ಣಗಳು ದೇವರು–ಧರ್ಮ, ಸ್ವರ್ಗ–ನರಕ, ಪವಿತ್ರ–ಅಪವಿತ್ರತೆಯ ಹೆಸರಿನಲ್ಲಿ ಶೂದ್ರವರ್ಗವನ್ನು ಶಿಕ್ಷಣದಿಂದ ದೂರ ಸರಿಸಿ ಅಧಿಕಾರ ಮತ್ತು ಆದಾಯ ವಂಚಿತರನ್ನಾಗಿಸಿ ದುಡಿಯುವ ವರ್ಗವನ್ನಾಗಿಸಿಕೊಂಡರು. ಶೂದ್ರರಾಗಿ ಹುಟ್ಟಲು ಪೂರ್ವ ಜನ್ಮ ಕರ್ಮದ ಫಲ ಎಂಬುದಾಗಿ ಮೇಲ್ವರ್ಣದವರು ನಂಬಿಸಿದರು. ಈ ಕರ್ಮ ಸಿದ್ಧಾಂತವೇ ಭಾರತೀಯ ಶೂದ್ರರನ್ನು ಹಲವು ಜಾತಿಗಳಲ್ಲಿ ವಿಂಗಡಿಸಿ ಕಸುಬುದಾರರೆಂದು ಕರೆದು ನಿಕೃಷ್ಟಗೊಳಿಸಿದರು. ಈ ಕುಂತಂತ್ರದಲ್ಲಿ ಪ್ರಮುಖ ಪಾತ್ರವಹಿಸಿದ್ದು ಬ್ರಾಹ್ಮಣತ್ವ. ಇದು ಸಂಸ್ಕೃತ ಭಾಷೆಯನ್ನು ದೇವಭಾಷೆಯೆಂದು ಕರೆದು ಶೂದ್ರರು ಕಲಿಯಬಾರದೆಂದು ನಿರ್ಬಂಧ ವಿಧಿಸಿದರು. ಅಂದಿನ ಶಿಕ್ಷಣವು ಸಂಸ್ಕೃತ ಭಾಷಾ ಮಾಧ್ಯಮದ ಮೂಲಕ ಗುರುಕುಲಗಳಲ್ಲಿ ವೇದ, ಉಪನಿಷತ್ತು, ಪುರಾಣ, ಯೋಗ, ಖಗೋಳ, ಸರಳಗಣಿತ, ವಾಸ್ತುಶಾಸ್ತ್ರ ಇತ್ಯಾದಿಗಳನ್ನು ಬ್ರಾಹ್ಮಣ ಸಂಸ್ಕೃತಿಗೆ ಪೂರಕವಾದ ಅದರ ಶ್ರೇಷ್ಠತೆಗೆ ಅನುಸಾರವಾದ ಪಠ್ಯಕ್ರಮ ಬೋಧನೆ ಮತ್ತು ಕಲಿಕೆ ಚಟುವಟಿಕೆಗಳ ಮೂಲಕ ನಡೆಯುತ್ತಿತ್ತು. ಶಿಕ್ಷಣ ಮಾಧ್ಯಮ ಸಂಸ್ಕೃತಭಾಷೆ, ಈ ಕಲಿಕಾ ಪ್ರಕ್ರಿಯೆ ಶೂದ್ರರರನ್ನು ಅವರ ಮಕ್ಕಳನ್ನು ಶಾಶ್ವತವಾಗಿ ಶಿಕ್ಷಣದಿಂದ ವಂಚನೆಗೊಳಗಾಗುವಂತೆ ಮಾಡಿತು. ಶಿಕ್ಷಣದಿಂದ ವಂಚಿತವಾದ ಶೂದ್ರರು ಅಧಿಕಾರ ಮತ್ತು ಸಂಪತ್ತಿನಿಂದ ದೂರ ಉಳಿಯುವಂತಾಯಿತು.

ಇದರ ಪರಿಣಾಮವಾಗಿ ಭಾರತದಲ್ಲಿ ಹೊಸಮತಗಳ ಉದಯದೊಂದಿಗೆ ಬೌದ್ಧ ಮತ್ತು ಜೈನ ಧರ್ಮಗಳು ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಸಮುದಾಯ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸಿ ಲಿಂಗ ಬೇದವಿಲ್ಲದೆ ಶಿಷ್ಯತ್ವ ನೀಡಿ ಶಿಕ್ಷಣವನ್ನು ಕಲಿಸಲು ಪ್ರಾರಂಬಿಸಿದರು. ಆ ಮೂಲಕ ಭಾರತದಲ್ಲಿ ಶೂದ್ರ ವರ್ಣವು ಶಿಕ್ಷಣವನ್ನು ಪಡೆಯಲು ಮುಂದಾಯಿತು. ಇಲ್ಲಿ ಕಲಿಕಾ ಮಾಧ್ಯಮ ಸಮುದಾಯದ ಸ್ಥಳೀಯ ಭಾಷೆ ಆಗಿದ್ದು, ಸುಲಭವಾಗಿ ಅರ್ಥವಾಗುವಂತೆ ಸರಳೀಕರಣ ಮಾಡಿ ಕಲಿಸಲಾಯಿತು. ಇಲ್ಲಿಯೂ ಸಹ ಎಲ್ಲರಿಗೂ ಶೈಕ್ಷಣಿಕ ಪ್ರವೇಶ ಆಯಿತು ಎಂದು ಹೇಳಲಾಗದು. ಬೌದ್ಧ ಮತ್ತು ಜೈನ ಧರ್ಮದ

ಅಹಿಂಸಾ ತತ್ವ, ಆಸೆಗಳ ನಿಯಂತ್ರಣ ಮನೋನಿಗ್ರಹ ಮುಂತಾದ ಅಷ್ಟಾಂಗ ಮಾರ್ಗ ತತ್ವಗಳಿಗೆ ಆದ್ಯತೆ ನೀಡಿ ಶಿಕ್ಷಣವನ್ನು ಕಲಿಸಲಾಯಿತು. ಬೌದ್ಧ ಮತ್ತು ಜೈನಧರ್ಮಗಳಿಗೆ ಆಶ್ರಯ ನೀಡಿದ ಮೌರ್ಯರು, ಕುಶಾನರು, ವರ್ಧನರು, ಚಾಲುಕ್ಯರು, ಹೊಯ್ಸಳರು ತಕ್ಷಶಿಲಾ, ನಳಂದಾ, ತಾಳಗುಂದಾ ಮುಂತಾದ ಕಡೆಗಳಲ್ಲಿ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣವನ್ನು ಪ್ರಚುರಗೊಳಿಸಿದರು.

ಮಧ್ಯಯುಗೀನ ಭಾರತದಲ್ಲಿ ಅರಬ್ಬರ, ಟರ್ಕರ, ಮೊಘಲರ ದಾಳಿಗಳ ಮೂಲಕ ಇಸ್ಲಾಂ ಶಿಕ್ಷಣ ಪದ್ಧತಿ ಜಾರಿಗೆ ಬಂದು ಅರೇಬಿಕ್, ಪರ್ಷಿಯನ್, ಉರ್ದುಗಳು ಶಿಕ್ಷಣ ಮಾಧ್ಯಮವಾದವು. ಆ ಮೂಲಕ ಇಸ್ಲಾಂ ಧರ್ಮ ತತ್ವಗಳು, ಸಂಸ್ಕೃತಿ, ವಾಸ್ತುಶಿಲ್ಪ, ಸಾಮಾಜಿಕ, ಆರ್ಥಿಕ, ಪರಿವರ್ತನೆಗೆ ಕಾರಣವಾಯಿತು. ಮತಾಂತರದ ಮೂಲಕ ಶೂದ್ರ ವರ್ಣವು ಮಕ್ತಾಬ ಮತ್ತು ಮದರಸಗಳಲ್ಲಿ ಇಸ್ಲಾಂ ಶಿಕ್ಷಣವನ್ನು ಪಡೆದು ಸ್ವಲ್ಪಮಟ್ಟಿನ ಅಧಿಕಾರ ಮತ್ತು ಸಂಪತ್ತನ್ನು ತನ್ನದಾಗಿಸಿಕೊಳ್ಳುವ ಅವಕಾಶವನ್ನು ಪಡೆದುಕೊಂಡಿತು ಎಂದು ಹೇಳಬಹುದು.

ಇಸ್ಲಾಂ ಸಾಮ್ರಾಜ್ಯದೊಂದಿಗೆ ಭಾರತವನ್ನು ಪ್ರವೇಶಿಸಿದ ವಸಾಹತುಶಾಹಿ ವ್ಯಾಪಾರಿಗಾಳಾದ ಯುರೋಪಿಯನ್ನರ ಆಗಮನದೊಂದಿಗೆ ಭಾರತೀಯ ಹಿಂದೂ ಮತ್ತು ಇಸ್ಲಾಂ ಶಿಕ್ಷಣ ಪದ್ಧತಿಗಳನ್ನು ಸಂಪೂರ್ಣವಾಗಿಯಲ್ಲದಿದ್ದರೂ ರಚನಾತ್ಮಕವಾಗಿ ಬದಲಾಯಿಸಿದ ಶ್ರೇಯಸ್ಸು ಆಂಗ್ಲರಿಗೆ ಸಲ್ಲುತ್ತದೆ. ಇವರ ಸಂದರ್ಭಕ್ಕೆ ಬೋಧನಾ ಮಾಧ್ಯಮ ಇಂಗ್ಲಿಷ್ ಭಾಷೆಯಾದರೆ ಪಠ್ಯಕ್ರಮವು ಮಾರುಕಟ್ಟೆ ಮತ್ತು ಆಡಳಿತಕ್ಕೆ ಪೂರಕವಾದ ಸಂವಹನ ತಂತ್ರಗಳನ್ನು ಕಲಿಸಲಾಗುತ್ತಿತ್ತು. ಈ ಸಂದರ್ಭವು ಶೂದ್ರರಿಗೆ ಶಿಕ್ಷಣ ಪ್ರವೇಶಕ್ಕೆ ಅನುಕೂಲಕರವಾದ ಅವಕಾಶವನ್ನು ಕಲ್ಪಿಸಿತು. ಆಂಗ್ಲರು ತಮ್ಮದೇ ಧರ್ಮ, ದೇವರು ಸಂಸ್ಕೃತಿಯನ್ನು ಪ್ರಚುರ ಪಡಿಸಲು ಕ್ರೈಸ್ತ ಮಿಷನರಿಗಳನ್ನು ಭಾರತದಲ್ಲಿ ಸ್ಥಾಪಿಸಿ ಶೂದ್ರರಿಗೂ ಶಿಕ್ಷಣ ರುಚಿಸುವಂತೆ ಮಾಡಿದರು. ಹೀಗೆ ಆಳುವ ಪ್ರಬಲ ವರ್ಗಗಗಳು ಅಧಿಕಾರ ಬಲದಿಂದ ಕಾಲಕಾಲಕ್ಕೆ ತಮ್ಮದೇ ಆದ ಶಿಕ್ಷಣ ಮಾಧ್ಯಮ, ಪಠ್ಯಕ್ರಮ, ಬೋಧನಾ ವಿಧಾನಗಳನ್ನು ಜಾರಿಗೊಳಿಸುವ ಮೂಲಕ ತಮಗೆ ಲಾಭದಾಯಕವಾಗುವಂತೆ ಪರಿವರ್ತಿಸಿ ಕೊಳ್ಳುತ್ತವೆ ಎಂಬುದನ್ನು ಇತಿಹಾಸದಿಂದ ತಿಳಿಯುವುದರ ಮೂಲಕ ಪ್ರಸ್ತುತ ಸಂದರ್ಭದಲ್ಲಿಯೂ ಈ ಬಗೆಯ ಸನ್ನಿವೇಶದಿಂದ ದೇಶದ ಶೈಕ್ಷಣಿಕ ವ್ಯವಸ್ಥೆ ಮುಕ್ತವಾಗಿಲ್ಲ. ಸ್ವಾತಂತ್ರ್ಯ ಭಾರತದಲ್ಲಿ ಪ್ರಜಾಪ್ರಭುತ್ವ ಸರ್ಕಾರವು ತನ್ನ ಜನತೆಗೆ ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸಿದೆ. ಆರರಿಂದ ಹದಿನಾಲ್ಕು ವರ್ಷದವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು ಅದರ ಕರ್ತವ್ಯವೂ ಆಗಿದೆ. ಈ ಹೊತ್ತಿನಲ್ಲಿ ದೇಶದ ಗಣ್ಯ ಪ್ರಬಲ ವರ್ಣ ಮತ್ತು ವರ್ಗಗಳು ಶಿಕ್ಷಣ, ಪಠ್ಯಕ್ರಮ, ಬೋಧನಾ ಮಾಧ್ಯಮ, ವಿಧಾನಗಳನ್ನು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಇದಕ್ಕೂ ಮೊದಲು ಶಿಕ್ಷಣದ ಅರ್ಥ, ವ್ಯಾಖ್ಯಾನ ಮತ್ತು ಮಹತ್ವವನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

**ಶಿಕ್ಷಣದ ಅರ್ಥ, ವ್ಯಾಖ್ಯಾನ, ಉದ್ದೇಶ ಮತ್ತು ಮಹತ್ವ**

ಶಿಕ್ಷಣದ ಅರ್ಥ, ವ್ಯಾಖ್ಯಾನ, ಉದ್ದೇಶ ಮತ್ತು ಮಹತ್ವ ಆಯಾ ದೇಶಗಳ ಗಣ್ಯಸಮುದಾಯಗಳ ಅಗತ್ಯಕ್ಕನುಗುಣವಾಗಿ ಬದಲಾಗುತ್ತಲೇ ಬರುತ್ತಿದೆ. ಶಿಕ್ಷಣ ಎಂಬ ಪದವು ಆಂಗ್ಲಭಾಷೆಯ 'Education' ಎಂಬ ಪದಕ್ಕೆ ಸಂವಾದಿಯಾಗಿದೆ. ಇದು 'ಎಜುಕೇರ್' ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಎಜ್ಯುಕೇರ್ ಎಂದರೆ ಎಳೆದೆತ್ತು ಅಥವಾ ಹಿಡಿದು ಮೇಲೆತ್ತು ಎಂದಾಗುತ್ತದೆ. ಅಂದರೆ ವ್ಯಕ್ತಿಯ ಅಂತರಂಗದಲ್ಲಿ ಅಡಗಿರುವ ಸುಪ್ತ ಚೇತನವನ್ನು ಪ್ರಕಾಶಮಾನವಾಗಿ ಬೆಳಗುವಂತೆ ಮಾಡುವ ಸಾಧನವೇ ಶಿಕ್ಷಣ ಎಂದು ಅರ್ಥೈಸಲಾಗಿದೆ. ಮೌಲ್ಯರಹಿತನನ್ನು ಮೌಲ್ಯಯುತನನ್ನಾಗಿ ಪರಿವರ್ತಿಸುವುದೇ ಶಿಕ್ಷಣ ಎನ್ನಲಾಗುತ್ತದೆ.

ಭಾರತದ ಖ್ಯಾತ ಶಿಕ್ಷಣ ತಜ್ಞರು ಮತ್ತು ತತ್ವಶಾಸ್ತ್ರಜ್ಞರು ಆಗಿರುವ ಡಾ. ರಾಧಕೃಷ್ಣನ್ ಅವರು ವ್ಯಾಖ್ಯಾನ ಮಾಡಿರುವಂತೆ "ಮಕ್ಕಳು ಮಾನವರಾಗಿ, ನಾಗರಿಕರಾಗಿ, ಇನ್ನೊಬ್ಬರೊಡನೆ ಮೈತ್ರಿ ಗೌರವ ಘನತೆಗಳಿಂದ ವರ್ತಿಸುವಂತೆ ಮಾಡಿ ಮಕ್ಕಳಲ್ಲಿ ಔದಾರ್ಯ, ಸಹೋದರ ಭಾವನೆ, ಸಹಾನುಭೂತಿಗಳು ಹೆಚ್ಚಾಗುವಂತೆ ಮಾಡುವುದೇ ಶಿಕ್ಷಣ" ಎಂದಿದ್ದಾರೆ. ಅಂದರೆ ಮಾನವನು ತನ್ನ ವರ್ತನೆಗಳ ಮೂಲಕ ಉತ್ತಮ ಸಮಾಜದ ನಿರ್ಮಾಣಕ್ಕೆ ಮೊದಲಾಗುವಂತೆ ತರಬೇತಿಗೊಳಿಸುವುದು ಶಿಕ್ಷಣದ ಕಾರ್ಯವಾಗಿದೆ. ಭಾರತದ ಇನ್ನೊಬ್ಬ ಶಿಕ್ಷಣ ತಜ್ಞ, ಶಿಕ್ಷಕ, ಕವಿ ಚಿಂತಕರಾದ ರವೀಂದ್ರನಾಥ ಟ್ಯಾಗೂರ್ ಅವರು ಹೇಳುವಂತೆ "ಆತ್ಮ ಪ್ರಕಾಶ ಪ್ರೇಮಿಗಳೆಂಬ ಸ್ಥಿರ ಸಂಪತ್ತನ್ನು ತಂದುಕೊಟ್ಟು ಮಗುವನ್ನು ಸುಂದರ ಯೋಗ್ಯ ಸತ್ಯವಂತನಾದ ವ್ಯಕ್ತಿಯನ್ನಾಗಿ ಮಾಡುವುದೇ ಶಿಕ್ಷಣ ಎಂದಿದ್ದಾರೆ. ಇಲ್ಲಿ ಶಿಕ್ಷಣವು ಮಗುವಿನಲ್ಲಿ ಪ್ರೀತಿ, ಪ್ರೇಮ, ಸತ್ಯ, ಸುಂದರ ಎಂಬ ಮಾನವೀಯ ಮೌಲ್ಯಗಳ ಗಣಿಯಾಗಿಸುವ ಪ್ರಕ್ರಿಯೆಯಾಗಿದೆ ಎಂದು ವ್ಯಾಖ್ಯಾವನ್ನು ನೀಡುತ್ತಾರೆ.

ಜಗತ್ತಿನ ಖ್ಯಾತ ಸಾಮಾಜಿಕ, ರಾಜಕೀಯ ಚಿಂತಕರು ತತ್ವಜ್ಞಾನಿಗಳು ಆಗಿರುವ ಅರಿಸ್ಟಾಟಲ್ ರವರು "ಮಾನವನ ಬುದ್ಧಿಶಕ್ತಿಯನ್ನು ಹೆಚ್ಚಿಸಿ ತನಗೆ ಪರಮೋಚ್ಚ ಸುಖವನ್ನು ಯಾವುದು ನೀಡಬಲ್ಲದೋ ಅಂತಹ ಪರಮ ಸತ್ಯವೂ, ಶಿವವೂ, ಸುಂದರವೂ ಆದ ವಿಷಯ ಅಥವಾ ವಸ್ತುವಿನ ಕಡೆಗೆ ನಮ್ಮ ಮನಸ್ಸನ್ನು ಸೆಳದು ಧ್ಯಾನಾಸಕ್ತರಾಗುವಂತೆ ಮಾಡುತ್ತದೋ ಅದೇ ಶಿಕ್ಷಣ" ಎಂದಿದ್ದಾರೆ. ಇವರು ಶಿಕ್ಷಣವನ್ನು ಮಾನವನ ಮನೋನಿಗ್ರಹ ಸಾಧನವನ್ನಾಗಿ ನೋಡುವುದರೊಂದಿಗೆ ಅದು ಅವನ ಪರಮ ಸುಖದ ಸಾಧನವಾಗಬೇಕು ಎಂದಿದ್ದಾರೆ. ಈ ಮೂವರ ವ್ಯಾಖ್ಯಾನಗಳನ್ನು ಗಮನಿಸಿದಾಗ ಅರ್ಥವಾಗುವ ಒಂದು ಅಂಶವೆಂದರೆ ಅದು ಮಾನವನ "ವರ್ತನೆಯ ಪರಿವರ್ತನೆ" ಎಂದಾಗುತ್ತದೆ.

ಶಿಕ್ಷಣದ ಗುರಿಗಳು ಕಾಲಘಟ್ಟಕ್ಕನುಗುಣವಾಗಿ ಬದಲಾವಣೆಗಳನ್ನು ಕಂಡಿವೆ ಹಾಗೂ ಕಾಣಿತ್ತಿವೆ. ಪ್ರಾಚೀನದಲ್ಲಿ ಆತ್ಮನಿವೇದನೆಯ ಗುರಿ, ಶೀಲ ಸಂವರ್ದನೆಯ ಗುರಿ, ಸಂಸ್ಕೃತಿ ಪೋಷಣೆಯ ಗುರಿ, ಉತ್ತಮ ಆರೋಗ್ಯದ ಗುರಿ, ಮಾನವೀಯ ಮೌಲ್ಯಗಳ ಬೆಳವಣೆಗೆಯ ಗುರಿ, ತಿಳುವಳಿಕೆಯ ಗುರಿ, ಹೊಂದಾಣಿಕೆಯ ಉದ್ದೇಶ, ಎಂದೆಲ್ಲ ನಿಗಧಿ ಪಡಿಸಲಾಗಿತ್ತು. ಇವುಗಳ ಜೊತೆಗೆ ಮುಂದುವರೆದು ಜೀವನೋಪಾಯದ ಗುರಿ ಸೇರ್ಪಡೆಗೊಳಿಸಲಾಯಿತು. ಇನ್ನು ಆಧುನಿಕತೆ ಕಾಲದ ಶಿಕ್ಷಣದ ಉದ್ದೇಶಗಳು ರಾಷ್ಟ್ರೀಯ ಭಾವೈಕ್ಯತೆಗಾಗಿ ಶಿಕ್ಷಣ, ಅಂತರಾಷ್ಟ್ರೀಯ ತಿಳಿವಳಿಕೆಗಾಗಿ ಶಿಕ್ಷಣ, ಶಾಂತಿ ಮತ್ತು ಸೌಹಾರ್ದತೆಗಾಗಿ ಶಿಕ್ಷಣ, ಪೌರತ್ವಕ್ಕಾಗಿ ಶಿಕ್ಷಣ, ಪ್ರಜಾಪ್ರಭುತ್ವದ ಉಳಿವಿಗಾಗಿ ಶಿಕ್ಷಣ, ವೈಜ್ಞಾನಿಕತೆಗಾಗಿ ಶಿಕ್ಷಣ, ವೃತ್ತಿಪರತೆಗಾಗಿ ಶಿಕ್ಷಣ ಎಂಬುದಾಗಿವೆ. ಇದೆಲ್ಲವನ್ನು ವಿವರಿಸುವಂತೆ ಡಿ.ವಿ.ಜಿ ಯವರು ತನ್ನ ಕಗ್ಗದಲ್ಲಿ

***ಏನು ಪ್ರಪಂಚವಿದು ! ಏನು ಧಾಳಿಧಾಳಿ !***
***ಏನದ್ಭುತಾಪಾರ ಶಕ್ತಿ ನಿರ್ಘಾತ !***
***ಮಾನವನ ಗುರಿಯೇನು ? ಬೆಲೆಯೇನು ? ಮುಗಿವೇನು ?***
***ಏನರ್ಥವಿದಕೆಲ್ಲ ? ಮಂಕುತಿಮ್ಮ.***

ಎಂದು ಹೇಳುತ್ತಾರೆ. ಇಲ್ಲಿ ಆಧುನಿಕತೆಯ ಘಮಲು ಮಾನವ ಸಮಾಜವನ್ನು ಆವರಿಸದಾಗ ಮಾನವನು ಅದನ್ನು ಹೇಗೆ ಎದುರುಗೊಳ್ಳಬೇಕಾಗುತ್ತದೆ ಎಂಬ ಪ್ರಶ್ನೆಗಳು ಕಾಡಲಾರಂಬಿಸುತ್ತವೆ. ಹೀಗೆ ಕಾಲಕಾಲಕ್ಕೆ ಶಿಕ್ಷಣದ ಅರ್ಥ, ವ್ಯಾಖ್ಯಾನ ಮತ್ತು ಗುರಿ ಉದ್ದೇಶಗಳು ಬದಲಾದಂತೆ ಬೋಧನೆಯ ಮಾಧ್ಯಮ, ವಿಧಾನ, ಸಾಧನ– ತಂತ್ರಗಳ ಬಳಕೆಯಲ್ಲಿಯೂ ಹಲವಾರು ಬದಲಾವಣೆಗಳು ಕಂಡುಬಂದಿವೆ.

ಭಾರತದಲ್ಲಿ ವೇದಗಳ ಕಾಲದಲ್ಲಿ ಶೃತಿ ಮತ್ತು ಸ್ಮೃತಿಗೆ ಆದ್ಯತೆ ನೀಡಿ ಉಪನಯನದೊಂದಿಗೆ ಗುರುಕುಲ ಪದ್ಧತಿ, ನಂತರದ ಕಾಲದಲ್ಲಿ ಅನುಭೂತಿಗೆ ಆದ್ಯತೆ ನೀಡಿರುವ ರವೀಂದ್ರನಾಥ ಠಾಗೂರರ ಶಾಂತಿನಿಕೇತನ, ಗಾಂಧೀಜಿಯವರ ಮೂಲ ಶಿಕ್ಷಣ, ಫ್ರೊಬೆಲ್ ಅವರ ಆಟದ ಮೂಲಕ ಪಾಠ (ಪ್ಲೆ.ವೇ ಮೆಥೆಡ್) ಇತ್ಯಾದಿಗಳು 3 ಹೆಚ್ ಅಂದರೆ ಹೆಡ್, ಹ್ಯಾಂಡ್, ಹಾರ್ಟ್ ತಲೆ–ಆಲೋಚನಾಶಕ್ತಿ, ಕೈ– ಕೆಲಸ–ಕಾರ್ಯಗಳು, ಹೃದಯ– ಸೌಂದರ್ಯ ತನವನ್ನು ಸಂಪನ್ನಗೊಳಿಸಲು ಅನುಕೂಲವಾಗುವಂತೆ ಶಿಕ್ಷಣ ನೀಡುವ ಕಲಿಕಾ ಪದ್ಧತಿಗಳನ್ನು ರೂಪಿಸಿದ್ದರು. ಪ್ರಸ್ತುತ ಶಿಕ್ಷಣವು 3 ಹೆಚ್ಗಳಿಗೆ ಬದಲಾಗಿ 3 ಆರ್ ಗಳಿಗೆ ಅಂದರೆ ರೀಡಿಂಗೆ, ರೈಟಿಂಗ್, ಅರ್ಥಮೆಟಿಕ್ (ಓದು, ಬರಹ, ಗಣಿತ) ಆದ್ಯತೆ ನೀಡಿದೆ. ಇದು ಮಗುವಿನ ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ ನೀಡದೆ ಕೇವಲ ಆಧುನಿಕ ಕಾರ್ಮಿಕ ವರ್ಗವನ್ನು ಸೃಷ್ಟಿಸಲು ಪ್ರಯತ್ನಸುತ್ತದೆ ಎಂದಾಯಿತು. ವ್ಯಕ್ತಿಗೆ ಅಗತ್ಯವಾದ ಮಾನವೀಯ ಮೌಲ್ಯಗಳನ್ನು ನೈತಿಕತೆಯನ್ನು ವೈಚಾರಿಕತೆಯನ್ನು ಬೋಧಿಸದೇ, ದುಡಿಯುವ ಮತ್ತು ಗಳಿಸುವ ಕೇವಲ ಮನುಷ್ಯರಾಗಿಸುವುದೇ ಇಂದಿನ ಶಿಕ್ಷಣದ ಗುರಿಯಾಗಿದೆ. ಆದಾಯ ಗಳಿಕೆಯೇ ಶಿಕ್ಷಣ ನೀಡಿಕೆ ಮತ್ತು ಪಡೆಯುವಿಕೆಯ ಮುಖ್ಯ ಗುರಿಯಾಗಿರುವಾಗ ಅದು ಮಾರುಕಟ್ಟೆಯ ಸರಕು ಆಗಿ ಪರಿವರ್ತನೆಯಾಯಿತು. ಮಾರುಕಟ್ಟೆಯು ಗ್ರಾಹಕನ ಬೇಡಿಕೆ, ಬಯಕೆ ಈಡೇರಿಸುವ ವ್ಯವಹಾರಿಕ ಸ್ಥಳವಾಗಿದ್ದು, ವ್ಯಾಪಾರಿ ಮತ್ತು ದಲ್ಲಾಳಿಯ ನಿಯಂತ್ರಣದಲ್ಲಿರುತ್ತದೆ. ಈ ವ್ಯಾಪಾರಿ ಮತ್ತು ದಲ್ಲಾಳಿಗಳು ಕ್ರಮವಾಗಿ ಮೇಲ್ವರ್ಗದ ಬಂಡವಾಳಶಾಹಿ–ರಾಜಕಾರಣಿ ಮತ್ತು ಅವರ ನೌಕರಶಾಹಿಗಳೇ ಆಗಿರುತ್ತಾರೆ. ಬಂಡವಾಳಶಾಹಿ–ರಾಜಕಾರಣಿ–ನೌಕರಶಾಹಿ ಹೇಗೆ ಶಿಕ್ಷಣದ ಪಠ್ಯಕ್ರಮ, ಬೋಧನಾ ವಿಧಾನ, ಬೋಧನಾ ಮಾಧ್ಯಮದ ಮೇಲೆ ಪ್ರಭಾವ ಬೀರುತ್ತಾರೆ, ಅದು ಅವರಿಗೆ ಲಾಭ ತಂದುಕೊಡುವ ಸಾಧನವಾಗಿದೆ.

**ಕರೋನಾ ವೈರಸ್ (ಕೋವಿಡ್ 19) ಕಾಲಘಟ್ಟದ ಶೈಕ್ಷಣಿಕ ಸಾಧಕ ಬಾಧಕಗಳು**

ಚತುರನು ಸಂಕಷ್ಟ ಕಾಲವನ್ನು ಲಾಭದಾಯಕವಾಗಿಸುವ ಚಾಕಚಕ್ಯತೆ ಪ್ರದರ್ಶಿಸಬಲ್ಲನು ಎಂಬುದು ಇತಿಹಾಸದುದ್ದಕ್ಕೂ ಸಾಬೀತಾಗಿರುವುದನ್ನು ನಾವು ಸೂಕ್ಷ್ಮವಾಗಿ ಗ್ರಹಿಸಿದ್ದೇವೆ. ಅದರ ಅಲ್ಪಮಾತ್ರ ಫಲಗಳನ್ನೂ ಅಕುಶಲರು ಪಡೆದುಕೊಂಡಿರೆ, ಆದರೆ ಹೆಚ್ಚು ಫಲಗಳು ಲಭಿಸಿರುವುದು ಉಳ್ಳ ಪ್ರಬಲ ವರ್ಗದವರಿಗೆ ಮಾತ್ರ ಎಂಬುದು ವಾಸ್ತವಾಂಶವಾಗಿದೆ. ಕೋವಿಡ್–19 ಸಂಕಷ್ಟ ಕಾಲ ದೇಶದ ಎಲ್ಲಾ ನಾಗರಿಕರನ್ನು ಬಹುವಾಗಿ ಹಿಂಸಿಸಿದೆ ಎಂಬುದು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ದೇಶಾದ್ಯಂತ 22 ಮಾರ್ಚ್ 2020 ರಿಂದ ಲಾಕ್‌ಡೌನ್ ಮಾಡಲಾಯಿತು. ಇದರ ಪರಿಣಾಮವಾಗಿ ದೇಶದ ಲಕ್ಷಾಂತರ ಕಾರ್ಮಿಕ ವರ್ಗ ಹಲವಾರು ಸಮಸ್ಯೆಗಳನ್ನು ಎದುರಿಸಿತು. ಅಷ್ಟೇ ಅಲ್ಲ ಪ್ರಾಣಾಪಾಯ ಮತ್ತು ಜೀವವನ್ನು ಕಳೆದುಕೊಂಡಿತು. ಇನ್ನು ಶಿಕ್ಷಣ ಕ್ಷೇತ್ರವನ್ನು ನೋಡುವುದಾದರೆ, ದೇಶದ ಎಲ್ಲಾ ಶಾಲಾ ಕಾಲೇಜುಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟವು. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳಿಂದ ವಂಚಿತರಾದರು. ಇದಕ್ಕೆ ಪರ್ಯಾಯವಾಗಿ ಖಾಸಗಿ ಶಾಲಾ ಕಾಲೇಜುಗಳು ಆನ್ಲೈನ್ ತರಗತಿಗಳನ್ನು ಸ್ಮಾರ್ಟ್ ಫೋನ್, ಲ್ಯಾಪ್‌ಟಾಪ್, ಟ್ಯಾಬ್, ಕಂಪ್ಯೂಟರ್ ಮುಂತಾದ ಸಾಧನಗಳನ್ನು ಬಳಸಿ ಝೂಮ್, ಗೂಗಲ್ ಕ್ಲಾಸ್‌ರೂಮ್, ಮೀಟ್ ಮುಂತಾದ ಆ್ಯಪ್‌ಗಳ ಮೂಲಕ ಆಯೋಜಿಸಿದವು. ಇನ್ನು ಸರ್ಕಾರಿ ಶಾಲಾ ಕಾಲೇಜು–ವಿಶ್ವವಿದ್ಯಾಲಯಗಳು ಈ ಸಾಹಸಕ್ಕೆ ಮುಂದಾದಾಗ ಉಂಟಾದ ಸಮಸ್ಯೆ ಎಂದರೆ, ಅಲ್ಲಿ ಆಧುನಿಕ ಮಾದರಿಯ ಸೌಲಭ್ಯಗಳು ಇಲ್ಲದ ಕಾರಣ

ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಬಳಿ ಅಂತಹ ಆಧುನಿಕ ಕಲಿಕಾ ಸಾಮಾಗ್ರಿಗಳು ಇಲ್ಲದ ಪ್ರಯುಕ್ತ ಆನ್ಲೈನ್ ಕಲಿಕಾ ಪ್ರಕ್ರಿಯೆಯಿಂದ ಹೊರತಳ್ಳಲ್ಪಟ್ಟರು. ಒಂದು ವೇಳೆ ಅಂತಹ ಸೌಲಭ್ಯಗಳು ಇದ್ದರೂ ಡೇಟಾ, ನೆಟ್‌ವರ್ಕ್ ಸಮಸ್ಯೆಯಿಂದ ಕಲಿಕೆಯು ಸಂಪೂರ್ಣವಾಗಿ ಸ್ಥಗಿತಗೊಂಡಿತು. ಇದರಿಂದ ಸಂಶೋಧನಾ ಕಾರ್ಯ ಚಟುವಟಿಕೆಗಳು ಸ್ತಬ್ದವಾದವು. ಆದರೆ ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಮಾತ್ರ ಪಟ್ಟುಬಿಡದೆ ವಿದ್ಯಾರ್ಥಿಗಳಿಗೆ ಆನ್ಲೈನ್ ಕಲಿಕಾ ಪ್ರಕ್ರಿಯೆಯನ್ನು ಮುಂದುವರಿಸಿ ಪಾಲಕ ಪೋಷಕರ ಆರ್ಥಿಕ ಹೊರೆಯನ್ನು ಹೆಚ್ಚಿಸಿದವು ಅಷ್ಟೇ ಅಲ್ಲದೆ ಫೀ ವಸೂಲಿಯನ್ನೂ ಮಾಡಿಕೊಂಡವು. ಮೊದಲೇ ಆರ್ಥಿಕ ಸಂಕಷ್ಟದಿಂದ ತತ್ತರಿಸಿದ್ದ ದುಡಿಯುವ ಮಧ್ಯಮ ವರ್ಗ ಮಕ್ಕಳಿಗೆ ಕಲಿಕಾ ಸಲಕರಣೆಗಳನ್ನು ಒದಗಿಸಿಕೊಡುವಲ್ಲಿ ವಿಫಲವಾಯಿತು. ಇನ್ನು ಕೆಲವರು ಒದಗಿಸಿಕೊಟ್ಟರೂ ಆನ್ಲೈನ್ ಕಲಿಕೆ ಎಂಬುದು ಮಗುವಿಗೆ ಹೊಸ ಪರಿಕಲ್ಪನೆಯಾಗಿದ್ದರಿಂದ ಅದಕ್ಕೆ ಹೊಂದಿಕೊಳ್ಳುವಲ್ಲಿ ಕಷ್ಟಪಡಬೇಕಾಯಿತು ಇಲ್ಲಿ ಕಲಿಕಾ ವಾತಾವರಣ ನಿರ್ಮಿಸುವುದು ಕಷ್ಟಸಾಧ್ಯವಾಯಿತು.

ಶಿಕ್ಷಣ ಅಥವಾ ಕಲಿಕೆಯು ಏಕ ಮುಖವಾಗಿರದೆ ಬಹುಮುಖ ಪ್ರಕ್ರಿಯೆಯಾಗಿದೆ. ಇಲ್ಲಿ ಶಿಕ್ಷಕ, ಮಗು, ಪಠ್ಯಪುಸ್ತಕ ಮತ್ತು ಕಲಿಕಾ ಸನ್ನಿವೇಶ (ಶಾಲಾ ಕೊಠಡಿ) ಪೂರಕವಾಗಿ ನಿರ್ಮಾಣಗೊಂಡಾಗ ಮಾತ್ರ ಕಲಿಕೆ ಪರಿಪೂರ್ಣವಾಗಿ ನಡೆಯಲು ಸಾಧ್ಯವಿದೆ ಎಂದು ಹಲವು ಶಿಕ್ಷಣ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇದ್ಯಾವುದನ್ನು ಪರಿಗಣಿಸದೆ ಆನ್ಲೈನ್ ಕಲಿಕೆಯು ಮುಂದುವರಿಸಿದರೆ ಅದು ಮಗುವನ್ನು ಹಲವು ಗೊಂದಲದಲ್ಲಿ ಬೀಳಿಸುತ್ತದೆ. ಶಿಕ್ಷಣದ ಉದ್ದೇಶ ಮತ್ತು ಗುರಿಗಳು ಈಡೇರುವುದು ಕಷ್ಟಸಾಧ್ಯವಾಗುತ್ತದೆ. ಅಷ್ಟೇ ಅಲ್ಲದೆ ಮಗುವನ್ನು ಮೊಬೈಲ್ ಗೀಳು ಹತ್ತುವಂತೆ ಮಾಡಿ ಹಲವು ಮಾನಸಿಕ ಹಾಗೂ ಆರೋಗ್ಯ ಸಂಬಂಧವಾದ ರೋಗಗಳಿಗೆ ತುತ್ತಾಗುವಂತೆ ಮಾಡುವುದೂ ಸಾಧ್ಯವಿದೆ. ಮಗುವಿನ ಆಲೋಚನಾ ಕ್ರಮ ಮತ್ತು ವೈಚಾರಿಕತೆಯನ್ನು ಬೆಳೆಸುವಲ್ಲಿ ಈ ಕಲಿಕಾ ಪದ್ಧತಿ ವಿಫಲಾಗುತ್ತದೆ ಎಂಬುದು ಹಲವು ಮನಃಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಅದರಲ್ಲೂ ಸರ್ಕಾರಿ ಶಾಲಾ–ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಓದುವ ವಿದ್ಯಾರ್ಥಿಗಳನ್ನು ಒಟ್ಟಾರೆ ಕಲಿಕಾ ಪ್ರಕ್ರಿಯೆಯಿಂದ ಹೊರತಳ್ಳಲ್ಪಟ್ಟಿತು ಎಂಬುದನ್ನು ಕ್ಷೇತ್ರಾಧ್ಯಯನದ ಮೂಲಕ ತಿಳಿಯುವ ಪ್ರಯತ್ನವನ್ನು ಮಾಡಿದ್ದೇನೆ.

**ಆನ್ಲೈನ್ ಕಲಿಕೆಗೆ ಸಂಬಂಧಿಸಿದ ವಿಶ್ಲೇಷಣೆ**

ಈ ಕ್ಷೇತ್ರಾಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಸ್ಥಳವೆಂದರೆ ಸರ್ಕಾರಿ ಪದವಿ ಪೂರ್ವಕಾಲೇಜು ವಿದ್ಯಾರ್ಥಿಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಇವರನ್ನೆ ಆಯ್ಕೆ ಮಾಡಿಕೊಳ್ಳಲು ಕಾರಣ ಇದು ಸಂಪೂರ್ಣವಾಗಿ ಗ್ರಾಮೀಣ ಪ್ರದೇಶವಾಗಿರುವುದು ಮತ್ತು ಇಲ್ಲಿ ಅಧ್ಯಯನ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಗ್ರಾಮೀಣ ಹಿನ್ನೆಲೆಯ ಕೃಷಿ ಕುಟುಂಬದಿಂದ ಬಂದವರಾಗಿದ್ದಾರೆ. ಹೆಚ್ಚಾಗಿ ಪ.ಜಾ. ಪ.ಪಂ. ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಾಗಿದ್ದಾರೆ. ಪದವಿ ಪೂರ್ವ ಹಂತದ ವಿದ್ಯಾರ್ಥಿಗಳು ಪಠ್ಯಕ್ರಮ ಮತ್ತು ವಿಷಯ ವಸ್ತುವನ್ನು ವಿಚಾರ ಮಾಡುವ ಮತ್ತು ವೈಜ್ಞಾನಿಕವಾಗಿ ಅರ್ಥೈಸುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತಾರೆ. ಈ ಹಂತದಲ್ಲಿ ಶಿಕ್ಷಣದ ಗುರಿ ಉದ್ದೇಶಗಳು ಈಡೇರಿಸುವ ಉದ್ದೇಶ ಆನ್ಲೈಲ್ ಕಲಿಕಾ ಪ್ರಕ್ರಿಯೆಗೆ ಇದೆಯೇ ಅಥವಾ ಶಿಕ್ಷಣವನ್ನು ಬಂಡವಾಳಶಾಹಿಗಳಿಗೆ ಆದಾಯ ತರುವ ಸರಕಾಗಿ ಮಾಡುವ ಉನ್ನಾರವೇ ಎಂಬುದನ್ನು ತಿಳಿಯುವ ಪ್ರಯತ್ನ ಇಲ್ಲಿ ನಡೆಸಲಾಗುತ್ತದೆ.

ಕ್ಷೇತ್ರಾಧ್ಯಯನದಲ್ಲಿ ಪ್ರಶ್ನಾವಳಿಯನ್ನು ಬಳಕೆ ಮಾಡಿಕೊಂಡು ವಿವಿಧ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಒಟ್ಟು 30 ವಿದ್ಯಾರ್ಥಿಗಳು 16 ಗಂಡು ಮತ್ತು 14 ಹೆಣ್ಣು ಮಕ್ಕಳನ್ನು ಆಯ್ಕೆ ಮಾಡಲಾಗಿದೆ. ಗಂಡು ಮಕ್ಕಳಲ್ಲಿ 06 ಪ.ಜಾ, 03

ಪ.ಪಂ, 03 2ಎ, ಕೆಟಗರಿ–1 ರಿಂದ 01, 3ಎ ನಿಂದ 03 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಅದೇ ರೀತಿ 14 ಹೆಣ್ಣು ವಿದ್ಯಾರ್ಥಿಗಳಲ್ಲಿ 04 ಪ.ಜಾ, 02 ಪ.ಪಂ, ಮುಸ್ಲಿಂ ಪಂಗಡದಿಂದ 02, 2ಎ ನಿಂದ 03, ಕೆಟಗರಿ–1 ರಿಂದ 01 ಮತ್ತು 3ಎ ನಿಂದ 1 ಒಂದು ವಿದ್ಯಾರ್ಥಿಯನ್ನು ಆಯ್ಕೆ ಮಾಡಲಾಗಿದೆ. ಈ ಎಲ್ಲಾ ವಿದ್ಯಾರ್ಥಿಗಳ ವಾರ್ಷಿಕ ಸರಾಸರಿ ಆದಾಯವು 35–40 ಸಾವಿರದ ಆಸುಪಾಸಿನಲ್ಲಿದೆ. ಮತ್ತು ಪಾಲಕ ಪೋಷಕರು ಕೃಷಿ ಮತ್ತು ಕೃಷಿಯೇತರ ಕೂಲಿಯನ್ನವಲಂಬಿಸಿ ಜೀವನವನ್ನು ರೂಢಿಸಿಕೊಂಡವರಾಗಿದ್ದಾರೆ.

ಆನ್ಲೈನ್ ಕಲಿಕೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುವ ಸಂದರ್ಭದಲ್ಲಿ ಸ್ಮಾರ್ಟ್ ಫೋನ್ ಬಳಕೆ ಮಾಡದ 04 ವಿದ್ಯಾರ್ಥಿಗಳು ಮುಸ್ಲಿಂ ವರ್ಗಕ್ಕೆ ಸೇರಿದ್ದರೆ 03 ಓಬಿಸಿಯ ಕುರುಬ ಜಾತಿಗೆ ಸೇರಿದ್ದಾರೆ. ಸ್ಮಾರ್ಟ್ ಫೋನ್ ಇದ್ದರೂ ಡೇಟಾ ಸಮಸ್ಯೆಯನ್ನು ಎದುರಿಸಿದ ವಿದ್ಯಾರ್ಥಿಗಳು ಶೇ 76% ಇದ್ದಾರೆ. ಡೇಟಾ ಇದ್ದರೂ ನೆಟ್ ವರ್ಕ್ ಸಮಸ್ಯ ಎದುರಿಸಿದವರು ಶೇ 95% ಇದ್ದಾರೆ. ಡೇಟಾ ಮತ್ತು ನೆಟ್‌ವರ್ಕ್ ಇದ್ದರೂ ಅದನ್ನು ಕುಳಿತು ಆಲಿಸುವಂತಹ ಪ್ರಶಾಂತ ಕಲಿಕಾ ವಾತಾವರಣ ಇಲ್ಲದ್ದು ಸರ್ವೇಸಾಮಾನ್ಯವಾಗಿ ಎಲ್ಲ ವಿದ್ಯಾರ್ಥಿಗಳ ಸಮಸ್ಯೆಯಾಗಿದೆ. ಡೇಟಾ ಸಮಸ್ಯೆಯನ್ನು ಕೂಲಿ ಕೆಲಸಕ್ಕೆ ಹೋಗುವುದರ ಮೂಲಕ ದುಡಿದು ಬಗೆಹರಿಸಿಕೊಂಡರೆ ನೆಟ್‌ವರ್ಕ್ ಸಮಸ್ಯೆ ನಿವಾರಣೆಗೆ ಮನೆಯ ಮೇಲೆ ಹತ್ತುವುದು ಮರ ಹತ್ತುವುದರ ಮೂಲಕ ಪ್ರಯತ್ನಿಸಿದ್ದಾರೆ.

ಇನ್ನು ಆನ್ಲೈನ್ ಪಾಠ ಪ್ರವಚನಗಳ ಸ್ಪಷ್ಟತೆಯನ್ನು ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿರುವ ಎಲ್ಲಾ ವಿದ್ಯಾರ್ಥಿಗಳಲ್ಲಿ ಶೇ.92% ವಿದ್ಯಾರ್ಥಿಗಳು ಧ್ವನಿ ಸ್ಪಷ್ಟತೆ ಇಲ್ಲದಿರುವುದು, ವಿಷಯ ಪರಿಪೂರ್ಣತೆ ಇಲ್ಲದಿರುವುದು, ಮತ್ತು ಕಲಿಕೆ ಪ್ರಕ್ರಿಯೆಯಲ್ಲಿ ಉಂಟಾಗುವ ಸಂದೇಹಗಳಿಗೆ ಸ್ಪಷ್ಟ ಪರಿಹಾರ ಸಿಗಲಾರದು ಎಂದು ತಿಳಿಸಿರುತ್ತಾರೆ. ಇನ್ನು ಯಾವ ಮಾದರಿಯ ಕಲಿಕಾ ವಾತಾವರಣ ನಿಮಗೆ ಹೆಚ್ಚು ಆಪ್ತ ಎನಿಸುತ್ತದೆ ಎಂಬ ಪ್ರಶ್ನೆಗೆ ಶೇ.99% ವಿದ್ಯಾರ್ಥಿಗಳು ಆಫ್ ಲೈನ್(ಸಂಪ್ರದಾಯಿಕ ತರಗತಿ) ಕಲಿಕಾ ವಿಧಾನವೇ ಹೆಚ್ಚು ಸೂಕ್ತ ವಿಧಾನ ಎಂದು ಉತ್ತರಿಸಿರುತ್ತಾರೆ. ಏಕೆಂದು ಕೇಳಿದ ಪ್ರಶ್ನೆಗೆ ಆನ್ಲೈನೆ ಕಲಿಕೆ ಸಂದರ್ಭದಲ್ಲಿ ಮನಸ್ಸನ್ನು ಕೇಂದ್ರೀಕರಿಸಲಾಗದೆ ಮನೋರಂಜನೆಯ ಕಡೆಗೆ ವಾಲುವ ಸಾಧ್ಯತೆ ಇರುತ್ತದೆ ಎಂದು ಹೇಳುತ್ತಾರೆ. ಇದರಿಂದ ಮಾನಸಿಕ ಏಕಾಗ್ರತೆ ಸಾಧ್ಯವಿಲ್ಲ, ಮೊಬೈಲ್‌ನ್ನು ಹೆಚ್ಚು ಬಳಸುವುದರಿಂದ ದೈಹಿಕ ಮತ್ತು ಮಾನಸಿಕ ಅನಾರೋಗ್ಯ ಉಂಟಾಗುತ್ತದೆ ಎಂದಿದ್ದಾರೆ.

ಆನ್ಲೈನ್ ಕಲಿಕೆ ಮಾಡುವುದು ಮುಂದುವರಿಸುವುದಾದರೆ ಸರ್ಕಾರವು ಕೂಡಲೇ ಎಲ್ಲಾ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಾಗ್ರಿಗಳಾದ ಲ್ಯಾಪ್‌ಟಾಪ್, ಟ್ಯಾಬ್, ಕಂಪ್ಯೂಟರ್, ಡೇಟಾ, ನೆಟ್‌ವರ್ಕ್ ಸಮಸ್ಯೆಯನ್ನು ಮೊದಲು ಬಗೆಹರಿಸಲಿ ಎಂದು ಉತ್ತರಿಸಿದ್ದಾರೆ. ಇನ್ನು ಬೋಧಿಸುವ ಶಿಕ್ಷಕರ ವಿಷಯ ಪಾಂಡಿತ್ಯ ಮತ್ತು ಮನೋಧೋರಣೆಯ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿರುವ ವಿದ್ಯಾರ್ಥಿಗಳು ಶಿಕ್ಷಕರಿಂದ ವಿಷಯ ಸ್ಪಷ್ಟತೆ ಮತ್ತು ಪಾಂಡಿತ್ಯವನ್ನು ಹೊಂದಿರುವ ಶಿಕ್ಷಕರಿಂದ ಪಾಠ ಮಾಡಿಸಬೇಕೆಂದು ಒತ್ತಾಯಿಸಿದ್ದಾರೆ. ಒಟ್ಟಾರೆಯಾಗಿ ಆನ್ಲೈನ್ ಕಲಿಕಾ ಪ್ರಕ್ರಿಯೆಗೆ ವಿದ್ಯಾರ್ಥಿಗಳಿಂದ ನಕಾರಾತ್ಮಕ ಉತ್ತರಗಳೇ ಹೆಚ್ಚಾಗಿರುವುದು ಕಂಡುಬರುತ್ತಿದೆ. ಇದರಿಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಕಷ್ಟಸಾಧ್ಯವಾಗಿದೆ ಎಂಬುದು ಪ್ರಸ್ತುತ ಸರ್ಕಾರಿ ಪದವಿ ಕಾಲೇಜುಗಳ ಉಪನ್ಯಾಸಕರ ಅಭಿಪ್ರಾಯವಾಗಿದೆ.

ಆನ್ಲೈನ್ ಕಲಿಕೆ ವಿಧಾನಗಳು ಮಾರುಕಟ್ಟೆಯಲ್ಲಿ ಬಂಡವಾಳಶಾಹಿಯ ಆದಾಯವನ್ನು ಹೆಚ್ಚಿಸುವ ತಂತ್ರಗಳಿಗೆ ಪೂರಕವಾಗಿದ್ದು, ಶಿಕ್ಷಣವನ್ನು ಮಾರುಕಟ್ಟೆಯ ಒಂದು ಮೌಲ್ಯಯುತ ಸರಕನ್ನಾಗಿಸಿವೆ ಎಂಬುದು ಈ ಮೂಲಕ ಕಂಡುಕೊಂಡ ಸತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಭಾರತೀದೇವಿ, ಪಿ. (2019). *ಪಿಯರ್ ಬೋರ್ಡ್ ವಿಚಾರಗಳು.* ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
- ಚಂದ್ರಾಚಾರ್, ಎಚ್. ಎಂ. (2014). *ಸಮಗ್ರ ಶೈಕ್ಷಣಿಕ ಮನೋವಿಜ್ಞಾನ.* ಅಶ್ವಿನಿ ಪ್ರಕಾಶನ.
- ಚಂದ್ರಶೇಖರ, ಟಿ.ಆರ್. (2001). *ಆಧುನಿಕ ಶಿಕ್ಷಣದ ಒಲವುಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಚಿದಾನಂದ ಸಾಲಿ. (2017). *ಶಿಕ್ಷಣ ಮತ್ತು ಜೀವನ ಶೈಲಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಹೆಗಡೆ, ಆರ್.ಡಿ. (2008). *ಭಾರತದಲ್ಲಿ ಶಿಕ್ಷಣ ಸವಾಲು ಸಾಧ್ಯತೆ.* ಚಿಂತನ ಪುಸ್ತಕ.
- ಲಕ್ಷ್ಮೀ, ಎನ್. (2012). *ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ.* ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ.
- ಶ್ರೀಪಾದ ಭಟ್. (2020). *ಜೆ.ಎನ್.ಯು ಅಂಗಳದಲ್ಲಿ ರಾಷ್ಟ್ರೀಯ ವಾದದ ಕ್ಲಾಸುಗಳು.* ಕ್ರಿಯಾ ಪುಸ್ತಕ.